5

# “ನಮ್ಮ ತಂದೆ”

ಬೈಬಲಿನಲ್ಲಿ ನಮ್ಮ ದೇವರಿಗೆ ಕೊಡಲ್ಪಟ್ಟ ವಿವರಣೆಗಳು ಎಷ್ಟು ಸ್ಪಷ್ಟವಾದವುಗಳೂ ಭವ್ಯವಾದವುಗಳೂ ವೈಭವವುಳ್ಳವುಗಳೂ ಗಂಭೀರವಾದವುಗಳೂ ಆಗಿರುತ್ತವೆ. (ಈ ಪಾಠಗಳು The Disciples’ Prayer ಎಂಬುದರಿಂದ ಬರುತ್ತವೆ. ಇದು ಮತ್ತಾಯ 6:5-9ರಲ್ಲಿ ಯೇಸುವು ತನ್ನ ಶಿಷ್ಯರಿಗೆ ಕಲಿಸಿದ ಮಾದರಿಯ ಪ್ರಾರ್ಥನೆಯ ಮೇಲೆ ಅವಲಂಭಿಸಿದೆ. ಈ ಪ್ರಾರ್ಥನೆಯಿಂದ ಸಹೋದರ ಮಕ್ಕೊರ್ಡ್ ಅವರು ಪರಲೋಕ ದಲ್ಲಿರುವ ನಮ್ಮ ತಂದೆಯ ಬಗ್ಗೆ ಮಹಾ ಸತ್ಯಗಳನ್ನು ಪಡೆದು ಕೊಂಡಿದ್ದಾರೆ.) ಆತನು ಮಹಾ ಸೃಷ್ಟಿಕರ್ತನೂ ಎಲ್ಲಾ ಸಂಗತಿಗಳನ್ನು ಮಾಡುವಾತನೂ ಆಗಿದ್ದಾನೆಂಬುದು ದೇವರ ಬಗ್ಗೆ ನನ್ನ ಮೊದಲಿನ ಅಭಿಪ್ರಾಯವಾಗಿತ್ತು. ನೀವು ನಿಮ್ಮ ಭಾವನೆಗಳನ್ನು ಹೊಂದಿಕೊಂಡಿರಬಹುದಾದ ಹಾಗೆಯೇ ನನ್ನ ತಾಯಿಯ ಮೊಣಕಾಲುಗಳ ಮೇಲೆ ಹೊಂದಿಕೊಂಡೆನು. ಅನಂತರ ನಾನು ಇದನ್ನು ಓದಿದೆನು:

> ಇಗೋ, ಪರ್ವತಗಳನ್ನು ರೂಪಿಸಿ, ಗಾಳಿಯನ್ನು ಸೃಷ್ಟಿಸಿ ತನ್ನ ಯೋಚನೆಗಳನ್ನು ಮನುಷ್ಯರಿಗೆ ತಿಳಿಸಿ ಉದಯವನ್ನು ಅಂಧಕಾರವನ್ನಾಗಿ ಮಾಡಿ ಭೂಮಿಯ ಉನ್ನತ ಸ್ಥಳಗಳಲ್ಲಿ ಸಂಚರಿಸುವಾತನಿಗೆ ಸೈನ್ಯಗಳ ಅಧಿಪತಿಯೂ ದೇವರಾದ ಯೆಹೋವನೆಂಬುದೇ ಆತನ ಹೆಸರು (ಆಮೋಸ 4:13).

ಆತನ ಅದ್ವಿತೀಯವಾದ ಸಾಮರ್ಥ್ಯಗಳು ನಮ್ಮನ್ನು ಆಕರ್ಷಿಸುವಂತಾವೆ: “ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೈವತ್ವವೂ ಜಗದುತ್ಪತ್ತಿಗೆ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಸ್ಪಷ್ಟವಾಗಿ ಕಂಡುಬರುತ್ತಿವೆಣಿ ...” (ರೋಮಾಪುರ 1:20). ಅಂಥ ದೇವರ ಮುಂದೆ ನಾವು ಆಶ್ಚರ್ಯ ಚಕಿತರಾಗಿ ನಿಂತುಕೊಳ್ಳುತ್ತೇವೆ.

ನನ್ನ ತಾಯಿ ಹಾಗೂ ಅನಂತರ ಬೈಬಲ್ ತಾನೇ ನನಗೆ ಕಲಿಸಿದ ಇನ್ನೊಂದು ಮೊದಲಿನ ಭಾವವು, ದೇವರು ಸೃಷ್ಟಿಕರ್ತನಾಗಿರುವದು ಮಾತ್ರವಲ್ಲದೇ “ದೇವರು ಎಲ್ಲರ ನ್ಯಾಯಾಧಿಪತಿಯೂ” ಆಗಿರುವನು ಎಂಬುದು (ಇಬ್ರಿಯ 12:23). ಪ್ರತಿಯೊಂದು ಕಾರ್ಯವನ್ನೂ, ಬಹಿರಂಗದ ಇಲ್ಲವೇ ರಹಸ್ಯವಾದ ಕೃತ್ಯಗಳನ್ನೂ ಒಳ್ಳೆಯವುಗಳು ಮತ್ತು ಕೆಟ್ಟವುಗಳು ಎರಡನ್ನೂ ಆತನು ನ್ಯಾಯತೀರ್ವಿಕೆಯೊಳಗೆ ತರುವನು (ಪ್ರಸಂಗಿ 12:14). ಆದುದರಿಂದ, ಕರ್ತನ ನ್ಯಾಯದ ಬಗ್ಗೆ (2 ಕೊರಿಂಥ 5:11) ಮತ್ತು ನ್ಯಾಯ ತೀರ್ವಿಕೆಯ ನಿಶ್ಚಿತತೆಯ ಬಗ್ಗೆ ನಾವು ಕೇಳಿರುವದರಿಂದ, ಮಾನವರಾದ ನಾವು ಆತನ ಮುಂದೆ ಭಯಭಕ್ತಿಯೊಂದಿಗೆ ನಿಲ್ಲುತ್ತೇವೆ.

## ನಾವು ಆತನಿಗೆ ಸಂಬಂಧಿಸಿದವರು

ದೇವರ ಅತೀ ಹೆಚ್ಚು ಪ್ರೀತಿಯುಳ್ಳ ಮತ್ತು ಅಮೂಲ್ಯವಾದ ಪ್ರಭಾವವು ಆತನಿಗೆ

ಮಿತಿಯಿಲ್ಲದ ಬಲವಿರುವಂಥದ್ದಲ್ಲ, ಆತನು ಎಲ್ಲರ ನ್ಯಾಯಾಧಿಪತಿಯಾಗಿರುವಂಥದ್ದಲ್ಲ, ಆದರೆ ಆತನು, ನಮ್ಮ ತಂದೆಯಾಗಿರುವಂಥದ್ದು. ಆತನು ನಮ್ಮ ತಂದೆಯಾಗಿದ್ದರೆ, ಆಗ ನಾವು ಆತನಿಗೆ ಸಂಬಂಧಸಿದವರು ಮತ್ತು ಆತನು ನಮಗಾಗಿ ಚಿಂತಿಸುವವನು ಆಗಿದ್ದಾನೆ. ಮಾನವ ಜೀವಿಗಳು, ಆದರೆ ಪ್ರಾಣಿಗಳಲ್ಲ, ದೇವರ ಸ್ವರೂಪದಲ್ಲಿ ಮಾಡಲ್ಪಟ್ಟಿದ್ದಾರೆ (ಯಾಕೋಬ 3:9). ನಮ್ಮಲ್ಲಿಯ ಆತನ ಆಸಕ್ತಿಯ ನಿಮಿತ್ತವಾಗಿ, "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯನನ್ನು ಮಾಡೋಣ" (ಆದಿಕಾಂಡ 1:26ಎ) ಎಂದು ದೇವರು ಕ್ರಿಸ್ತನಿಗೆ ಹೇಳಿದನು. ಮನುಷ್ಯನು ಯಾವುದೇ ಕೆಳಮಟ್ಟದ ಪ್ರಾಣಿಯ ಸ್ವರೂಪದಲ್ಲಿ ಮಾಡಲ್ಪಟ್ಟಿದ್ದಾನೆ ಎಂದು ಯೋಚಿಸುವ ವಿಕಾಸವಾದಿಗಳಿಗೆ ಈ ಆಕರ್ಷಕ ವಿಚಾರವು ಮೆಚ್ಚಿಕೆಯಾಗುವದಿಲ್ಲ. ಮನುಷ್ಯನು "ದೇವರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟಿದ್ದಾನೆ" (ಕೀರ್ತನೆ 8:5ಬಿ ASV), ಹಾಗೂ ಅವನು "ಆತ್ಮಗಳ ತಂದೆಯ" ಮಗನಾಗಿದ್ದಾನೆ (ಇಬ್ರಿಯ 12:9) ಎಂಬುದನ್ನು ಬೈಬಲಿನ ವಿಶ್ವಾಸಿಗಳು ಹೆಮ್ಮೆ ಪಡುತ್ತಾರೆ. ಸೃಷ್ಟಿಯಿಂದ ಎಲ್ಲಾ ಜನರು ದೇವರ ಮಕ್ಕಳಾಗಿದ್ದಾರೆ ಮತ್ತು ಎಲ್ಲಾ ಮಾನವ ಜನಾಂಗಕ್ಕೆ ಒಬ್ಬನೇ ತಂದೆಯಿದ್ದಾನೆ (ಆದಿಕಾಂಡ 6:2ಬಿ ಲೂಕ 3:38ಬಿ ಅಪೊಸ್ತಲರ ಕೃತ್ಯ 17:26).

ನಮ್ಮ ವಂಶಾವಳಿಯು ಕೆಳಗಿನಿಂದ ಬಂದದ್ದಲ್ಲ ಆದರೆ ಪರಲೋಕದಿಂದ ಬಂದದ್ದು ಎಂಬುದು ಉಲ್ಲಾಸಕರವಾದದ್ದಾಗಿದೆ. ಹೀಗಿದ್ದರೂ ಸೃಷ್ಟಿಯಿಂದ ದೇವರ ಮಗುವಾಗಿರುವಲ್ಲಿ ಮಾತ್ರವೇ ಉಲ್ಲಾಸಪಡುವ ಮನುಷ್ಯನು, ಸುವಾರ್ತೆಯಿಂದ ಎಂದೂ ದೇವರ ಮಗನಾಗದಿದ್ದವನು ಕೀಳು ಪ್ರಾಣಿಗಿಂತಲೂ ಕೆಟ್ಟದ್ದಾದ ಅಂತ್ಯ ಹೊಂದುವವನು. ಕೀಳು ಪ್ರಾಣಿಗಳು ಸಾಯುವವು ಮತ್ತು ಅಸ್ತಿತ್ವ ಇಲ್ಲದವುಗಳಾಗುವವುಬಿ ಆದರೆ ಮನುಷ್ಯನಲ್ಲಿ ಎಂದೂ ಸಾಯದಂತಿರುವಂಥದ್ದು ಇರುವುದು. ಅದು ನಿತ್ಯಬೆಂಕಿಯ ಗಂಡಾಂತರದಲ್ಲಿರುವುದು. ದೇವರ ಸ್ವಭಾವವನ್ನು ಧರಿಸಿಕೊಳ್ಳುವ ಅವಕಾಶ ಹೊಂದಿರುವನು. ಆದರೆ ತನ್ನ ತಂದೆಗೆ ವಿಧೇಯತೆಯನ್ನು ನಿರಾಕರಿಸುವವನಿಗೆ, ಅವನು ಎಂದೂ ಹುಟ್ಟಿರದಿದ್ದರೆ ಚೆನ್ನಾಗಿರುತ್ತಿತ್ತು. ಸರಿಯಾಗಿರಲು ಒಬ್ಬ ಮನುಷ್ಯನು ಎರಡು ಅರ್ಥಗಳಲ್ಲಿ ದೇವರ ಮಗನಾಗಿರಬೇಕು: ಸೃಷ್ಟಿ ಹಾಗೂ ನೂತನ ಸೃಷ್ಟಿ. ಅವನು ಶಿಶುವಾಗಿ ಭೂಲೋಕದ ತಂದೆತಾಯಿಗಳಿಗೆ ಜನಿಸಿದ್ದಾನೆ, ಆದರೆ ಅವನು ಹೊಸದಾಗಿ ಹುಟ್ಟಬೇಕು (ಯೋಹಾನ 3:3). ಆವನು ಕರ್ತನಾದ ಕ್ರಿಸ್ತನಲ್ಲಿ "ನೂತನ ಜೀವಿ" ಯಾಗುವನು (2 ಕೊರಿಂಥ 5:17). "ನಾನು ನಿಮಗೆ ನಿಜವಾಗಿ ಹೇಳುತ್ತೇನೆ, ಒಬ್ಬನು[1] ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು" (ಯೋಹಾನ 3:5ಬಿ KJV) ಎಂದು ಕರ್ತನು ಹೇಳಿದನು.

## ನಾವು ಆತನಿಗೆ ಅಮೂಲ್ಯರಾಗಿದ್ದೇವೆ

ನೀವು ನಿಮ್ಮ ತಂದೆಯ ಬಗ್ಗೆ ಯೋಚಿಸುವಾಗ ನಿಮ್ಮ ಹೃದಯಗಳಲ್ಲಿ ಉಕ್ಕಿ ಬರುವ ಭಾವನೆಯನ್ನು ಯೇಸುವು ತಿಳಿದಿದ್ದನು. ಅಂಥದ್ದೇ ರೀತಿಯಲ್ಲಿ ತನ್ನ ಶಿಷ್ಯರು ದೇವರ ಬಗ್ಗೆ ಯೋಚಿಸಬೇಕೆಂದು ಆತನು ಬಯಸಿದನು. ಭೂಲೋಕದ ತಂದೆಯು ತನ್ನ ಮಗುವಿನ ಬಾಯಲ್ಲಿ ರೊಟ್ಟಿಯನ್ನು ಹಾಕಲು ತ್ಯಾಗ ಮಾಡುವಾಗ, "... ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ" (ಮತ್ತಾಯ 7:11). ಆತನು ಮಿತಿಯಿಲ್ಲದವನಾಗಿರುವನು. ನನಗಿಂತ ಹೆಚ್ಚಾಗಿ ನನ್ನ ಬಗ್ಗೆ ತಿಳಿದಿರುವನು. ನನ್ನ ತಲೆಯ ಪ್ರತಿಯೊಂದು ಕೂದಲನ್ನು

ಎಣಿಸಿರುವನು (ಲೂಕ 12:7). ಒಬ್ಬ ಗುಬ್ಬಿಯನ್ನಾದರೂ ಎಂದೂ ಮರೆಯಲಾರದಾತನು ತನ್ನ ಮಕ್ಕಳಿಗೆ, "ಹೆದರ ಬೇಡಿರಿಣಿ ಬಹಳ ಗುಬ್ಬಿಗಳಿಗಿಂತ ನೀವು ಹೆಚ್ಚಿನವರು" (ಲೂಕ 12:7) ಎಂದು ಭರವಸೆ ಕೊಟ್ಟಿರುವನು.

ಒಬ್ಬ ಏಳು ಮಕ್ಕಳ ತಾಯಿಯು, "ನನ್ನ ಮಕ್ಕಳಲ್ಲಿ ಪ್ರತಿಯೊಬ್ಬನೂ ಎಲ್ಲರಷ್ಟು ಅಮೂಲ್ಯನಾಗಿದ್ದಾನೆ" ಎಂದು ಹೇಳಿದಳು. ಮಾನವ ತಂದೆ ತಾಯಿಗಳು ಪ್ರೀತಿ ಸುವವರಾಗಿದ್ದಾರೆ. ಆದರೆ ಅನಂತನಾದ ತಂದೆಯು ಇದಕ್ಕಿಂತ ಎಷ್ಟು ಹೆಚ್ಚು ಪ್ರೀತಿಸು ವಾತನಾಗಿರುವನಲ್ಲವೇ! ಆತನು ನನ್ನ ಮೇಲೆ ಆಸಿಕ್ತಿಯಿಂದ ಗಮನಿಸುತ್ತಿರುವನು. ಅದೇ ಸಮಯದಲ್ಲಿ ಆತನು ಜಗತ್ತಿನ ಇನ್ನೊಂದು ಭಾಗದಲ್ಲಿಯ ವ್ಯಕ್ತಿಗಾಗಿಯೂ ಚಿಂತನೆಯಲ್ಲಿರುವನು. ಈಗ ಜೀವಿಸುತ್ತಿರುವ ಆರು ಬಿಲಿಯನ್ ಜನರಿಗಿಂತಲೂ ಹೆಚ್ಚಾದ ಹಾಗೂ ಆತ್ಮಿಕ ಜಗತ್ತಿನಲ್ಲಿಯ ಇನ್ನೂ ಎಷ್ಟೋ ಬಿಲಿಯನ್ ಜನರ ಹೆಸರುಗಳನ್ನು ಆತನು ತಿಳಿದಿರುವನು. ವೇದಿಯ ಕೆಳಗಿರುವ (ಹಿಂಸೆಯನ್ನು ಅನುಭವಿಸುತ್ತಿರುವವರ[2]) ಆತ್ಮಗಳು ತಮ್ಮ ವಿಮೋಚಕನನ್ನು ಕರೆಯುವಾಗ ಆತನು ಕೇಳಿಸಿಕೊಳ್ಳುವನು (ಪ್ರಕಟನೆ 6:9, 10). ಇನ್ನೂ ದೇಹದಲ್ಲಿರುವ ಆರು ಬಿಲಿಯನ್‌ಗಿಂತಲೂ ಹೆಚ್ಚು ದೇವರ ಸ್ವರೂಪದಲ್ಲಿರುವ ಪ್ರತಿಯೊಬ್ಬರೂ ಆತನನ್ನು ಒಮ್ಮೆಲೇ ಕೂಗಬಹುದು. ಅವರೆಲ್ಲರ ಕೂಗನ್ನು ಕೇಳಲು ಆತನಿಗೆ ಯಾವ ತೊಂದರೆಯೂ ಆಗುವದಿಲ್ಲ. ಆ ಒಬ್ಬನೇ ಅಸ್ತಿತ್ವದಲ್ಲಿರುವ ವ್ಯಕ್ತಿಯೋ ಎಂಬಂತೆ ಆತನು ಪ್ರತಿಯೊಬ್ಬನನ್ನೂ ತಾಳ್ಮೆಯಿಂದಲೂ ಹೃದಯ ಪೂರ್ವಕವಾಗಿಯೂ ಕೇಳುವನು.

## ನಾವು ಆತನಿಗೆ ಜವಾಬ್ದಾರರಾಗಿದ್ದೇವೆ

ಯಥಾರ್ಥತೆಯಿಲ್ಲದೆ ಪ್ರಾರ್ಥಿಸುವ ಯಾರ ಪ್ರಾರ್ಥನೆಯನ್ನೂ ತಂದೆಯು ಕೇಳುವದಿಲ್ಲ. ದೇವರ ನಿಯಮದಿಂದ ದೂರ ಹೋಗುವವನಿಂದ ಪ್ರಾರ್ಥನೆಯು ಅರ್ಪಿಸಲ್ಪಡುವಾಗಲೂ ಅದು ಅಪ್ರಿಯವಾದದ್ದೂ ಅಸಹ್ಯವಾದದ್ದೂ ಆಗುತ್ತದೆ (ಜ್ಞಾನೋಕ್ತಿ 28:9). ಕರ್ತನ ಕಣ್ಣುಗಳು ನೀತಿವಂತರ ಮೇಲಿರುತ್ತವೆ ಮತ್ತು ಅವರ ಪ್ರಾರ್ಥನೆಗಳಿಗೆ ಆತನ ಕಿವಿಗಳು ತೆರೆದಿರುತ್ತವೆಣಿ ಆದರೆ ದುಷ್ಟತನ ಮಾಡುವವನಿಗೆ ಕರ್ತನ ಮುಖವು ವಿರುದ್ಧವಾಗಿರುತ್ತದೆ (1 ಪೇತ್ರ 3:12). ಅಧೈರ್ಯಗೊಳ್ಳದೇ ಆತನೊಂದಿಗೆ ಮಾತನಾಡಲು, ಸರಿಯಾದದ್ದನ್ನು ಮಾಡಲು ಬಯಸುವವರನ್ನು ಆತನು ಕೇಳುತ್ತಾನೆ (ಲೂಕ 18:1).

ಭೂಲೋಕದ ತಂದೆ ಮತ್ತು ಪರಲೋಕದ ತಂದೆ ಇಬ್ಬರೂ "ನಿನಗೆ ಕೃತಜ್ಞತೆ" ಎಂದುಹೇಳಲುಮಗುವುಬರುವಾಗಸಂತೋಷಗೊಳ್ಳುತ್ತಾರೆ.ಪ್ರಾತಃಃಃ ಕಾಲದಲ್ಲಿನಾನು ಆತನೊಂದಿಗೆ ಮಾತನಾಡಲಾರದೇ ನನ್ನ ಕೋಣೆ ಬಿಟ್ಟು ಹೋಗುವಾಗ ತಂದೆಯ ದೊಡ್ಡ ಹೃದಯವು ದು ಖಕ್ಕೊಳಪಡುತ್ತದೆ. ಆತನಿಂದ ಆತ್ಮ ವಿಶ್ವಾಸಪಡೆಯದೇ, ಆತನ ನಡಿಸುವಿಕೆ, ಜೋಪಾಸನೆಯನ್ನು ಬೇಡಿಕೊಳ್ಳದೇ ದಿನದ ಕಾರ್ಯಗಳನ್ನು ಮುಂದು ವರಿಸಲು ನಾನು ಪ್ರಯತ್ನಿಸುವಾಗಲೂ ಆತನಿಗೆ ಹಾಗೆ ಅನಿಸುತ್ತದೆ. ಯೇಸುವಿನಂತೆ (ಮಾರ್ಕ 1:35) ನಿಮಗೆ ಸಹಾಯಮಾಡುವ ತಂದೆಯೊಂದಿಗೆ ವೈಯಕ್ತಿಕವಾಗಿ ಮಾತನಾಡದಿದ್ದರೆ ಒಂದು ದಿನವನ್ನೂ ಕಳೆಯಲಾರಿರಿ ಇಲ್ಲವೇ ನೀವು ಮಾಡಬೇಕಾದದ್ದನ್ನು ಮಾಡಲಾರಿರಿ ಎಂದು ನಂಬಿದರೆ, ಆತನಿಗೆ ಸಂತೋಷವಾಗುತ್ತದೆ. ಏಕಾಂತದಲ್ಲಿ ನೀವು ದೇವರೊಂದಿಗೆ ಮಾತನಾಡುವದಕ್ಕಾಗಿ ಅರಣ್ಯ ಪ್ರದೇಶದೊಳಗೆ ಹೋಗುವಾಗ ಅಥವಾ "ಗುಲಾಬಿಗಳ ಮೇಲೆ ಮಂಜಿನ ಹನಿ ಇರುವಾಗ"[3] ಒಂದು ತೋಟ ದಲ್ಲಿ ನಡೆಯು ವಾಗ, ದಿನಕ್ಕಾಗಿ ನೀವು ಬಲವನ್ನು ಹೊಂದಿ ಕೊಳ್ಳುವಿರಿ ಮತ್ತು ನೀವು ಸೈತಾನನಿಗೆ

ಸುಲಭವಾದ ಗುರಿಯಾಗಿರುವದಿಲ್ಲ. "... ನಿನ್ನ ದಿನಗಳಿಗನುಗುಣವಾಗಿ, ನಿನ್ನ ನಿಧಾನವಾದ ನಡೆಯಿರುವುದು" (ಧರ್ಮೋಪದೇಶಕಾಂಡ 33:25). ದಾನಿಯೇಲ ನಂತೆ, ದಿನದ ಮಧ್ಯದಲ್ಲಿ ದೈವಿಕ ಜೊತೆಗಾರನೊಂದಿಗೆ ಪರಲೋಕ ಸ್ಥಳಗಳಲ್ಲಿ ಕುಳಿತುಕೊಳ್ಳಲು ಸಮಯ ತೆಗೆದು ಕೊಂಡರೆ, ನೀವು ದಿನದ ಕಾರ್ಯದಲ್ಲಿ ಹೆಚ್ಚು ದಯೆಯುಳ್ಳವರೂ ಹೆಚ್ಚು ತಾಳ್ಮೆಯುಳ್ಳವರೂ ಆಗಿರುವಿರಿ. ಸಾಯಂಕಾಲದಲ್ಲಿ ನಿಮ್ಮ ಆಹಾರಕ್ಕಾಗಿ, ಹಾಸಿಗೆಗಾಗಿ, ನಿಮ್ಮ ಕುಟುಂಬಕ್ಕಾಗಿ, ಸ್ನೇಹಿತರಿಗಾಗಿ, ಕ್ಷಮಾಪಣೆಗಾಗಿ ಹಾಗೂ ಶುದ್ಧೀಕರಣಕ್ಕಾಗಿ ಉಪಕಾರ ಹೇಳುವದನ್ನು ಮರೆಯಬೇಡಿರಿ; ರಕ್ಷಣೆಯ ಆನಂದವು ನಿಮಗೆ ಪುನ ದೊರೆಯುವುದು ಮತ್ತು ನಿಮ್ಮ ನಿದ್ರೆಯು ಗಾಢವಾದದ್ದೂ ಹೆಚ್ಚು ಸಮಾಧಾನಕರವಾದದ್ದೂ ಆಗಿರುವುದು.

## ಆತನು ನಮ್ಮ ಮನವಿ ಆಲಿಸುವನು

ನಿಮಗೊಬ್ಬ ತಂದೆಯಿರುವನು. ಆತನು ನಿಮ್ಮ ತಂದೆಯು. ನಾವು ಅತ್ಯುನ್ನತನಾದ ದೇವರಿಗೆ, ಪರಲೋಕ ಭೂಲೋಕವನ್ನು ವಶಪಡಿಸಿಕೊಂಡಾತನಿಗೆ, ಪರಲೋಕದ ತಂದೆಗೆ ಮಾತಾಡುವ ಅವಕಾಶ ಹೊಂದಿದ್ದೇವೆ. ಬೇರೆ ಯಾರಿಗೆ ಪ್ರಾರ್ಥಿಸಲು ನಾವು ಶೋಧಿಸಲ್ಪಡಬೇಕು? ಮಿಲಿಯನ್ ಗಟ್ಟಲೆ ನಿಷ್ಕಪಟವಾದ ಮಕ್ಕಳು ಮರಿಯಳಿಗೆ ಮತ್ತು ಸಂತರಿಗೆ ಪ್ರಾರ್ಥಿಸಲು ಕಲಿಸಲ್ಪಟ್ಟಿರುವುದು ದು ಖಕರವಾದದ್ದಾಗಿದೆ. ದೇವದೂತರಿಗೂ ಸಹ ಸಲ್ಲಲಾರದ ಮಹಿಮೆಯು ಕೊಡಲ್ಪಡಬಾರದು (ಮತ್ತಾಯ 4:10; ಕೊಲೆಸ್ಸೆ 2:18; ಪ್ರಕಟನೆ 22:8, 9). ದೇಹದಲ್ಲಿರುವ ಇಲ್ಲವೇ ದೇಹದಲ್ಲಿರದ ಮಾನವರಿಗೂ ಕೊಡಲ್ಪಡಬಾರದು (ಅಪೊಸ್ತಲರ ಕೃತ್ಯ 10:25, 26; 14:15). ಮರಿಯಳಿಗೆ ಪ್ರಾರ್ಥಿಸುವವರು, "ಸೃಷ್ಟಿಕರ್ತನನ್ನು ಪೂಜಿಸದೇ ಸೃಷ್ಟಿ ವಸ್ತುಗಳನ್ನು ಪೂಜಿಸಿ ಸೇವಿಸುವವರಾದರು. ಸೃಷ್ಟಿಕರ್ತನೊಬ್ಬನೇ ನಿರಂತರ ಸ್ತುತಿ ಹೊಂದತಕ್ಕವನು" (ರೋಮಾಪುರ 1:25). ಮನುಷ್ಯನು ತನ್ನ ಸ್ನೇಹಿತನೊಂದಿಗೆ ಮಾತಾಡುವಂತೆ ತಂದೆಯೊಂದಿಗೆ ನಾವು ಮಾತಾಡ ಬಹುದಾದ್ದರಿಂದ, ಹಾಗೂ ನಮಗಾಗಿ ಪ್ರಾರ್ಥನಾವಿಜ್ಞಾಪನೆ ಮಾಡಲು ಪಕ್ಕದಲ್ಲಿ ನಿಂತಿರುವವರು, ಪರಿಶುದ್ಧಾತ್ಮ (ರೋಮಾಪುರ 8:26, 27) ಹಾಗೂ ಯೇಸು (1 ಯೋಹಾನ 2:1) ಆಗಿರುವದರಿಂದ ಆನಂದಪಡೋಣ.

ನಾವು ದೇವರನ್ನು "Thou" ಎಂಬುದರ ಬದಲು "You" ಎಂದು ಸಂಬೋಧಿಸುವಾಗ, ನಾವು ಆತನೊಡನೆ ಬಹಳವಾಗಿ ನಿಕಟವಾಗಿದ್ದೇವೆಂದು ಕೆಲವರು ಹೇಳಿದ್ದಾರೆ. "Thou" ಎಂಬುದು ವಯಸ್ಸಾದಂತೆ ನರೆತದ್ದಾದ್ದರಿಂದ ಹೆಚ್ಚು ಗೌರವವುಳ್ಳದ್ದಾಗಿದೆ: ಮರ್ಯಾದೆಯ ಭಾಷೆಯು ಇನ್ನು ಮೇಲೆ ಸಾಮಾನ್ಯ ಪದಗಳಿಗಿಂತ ಹೆಚ್ಚು ಗೌರವ ತೋರಿಸುವದಿಲ್ಲ. ಲೋಕವನ್ನು ಪಾಪವು ಪ್ರವೇಶಿಸುವದಕ್ಕಿಂತ ಮೊದಲು ದಿನದ ತಂಪಿನಲ್ಲಿ ಏದೆನ್ ತೋಟದ ಮರಗಳ ಕೊಂಬೆಗಳ ಕೆಳಗೆ ಆದಾಮನೊಂದಿಗೆ ತಂದೆಯು ನಡೆಯಲು ಬಯಸಿದಂತೆ - ಆತನೊಂದಿಗೆ ನೀವು ಬಹಳ ನಿಕಟವಾಗಿರಲಾರಿರಿ (ಆದಿಕಾಂಡ 3:8ಎ ದಲ್ಲಿ ಅನ್ವಯಿಸಿದಂತೆ). ಮಾನವನು ದೇವರೊಂದಿಗೆ ಬಹಳವಾಗಿ ಮಾತುಗಾರನಾಗಿರಬಹುದು ಮತ್ತು ಒಬ್ಬನನ್ನು ಅದಕ್ಕಾಗಿ ಖಂಡಿಸಬಹುದು. ಹೀಗಿದ್ದರೂ, ಸಮೀಪವಾಗಿರುವ ಅರ್ಥದಲ್ಲಿ, ನಾವು ದೇವರೊಂದಿಗೆ ನಿಕಟವಾಗಿರಬೇಕು. ಯಾಕಂದರೆ ನಾವು ಆತನ ಸ್ವರೂಪದಲ್ಲಿ ಮಾಡಲ್ಪಟ್ಟಿದ್ದೇವೆ. ನಮ್ಮ ಆಳವಾದ ವಿಚಾರಗಳೊಂದಿಗೆ ಆತನ ಬಳಿಗೆ ನಾವು ಹೋಗಬಹುದು; ನಮ್ಮ ಬಗ್ಗೆ ಆತನು ಪ್ರತಿಯೊಂದನ್ನೂ ತಿಳಿದಿರುವನು. ನಮ್ಮ ಜೀವನಗಳು

ಆತನ ಕೃಪೆಯ ಸ್ತೋತ್ರ ಮಾಡಲು ಮತ್ತು ಮಹಿಮೆ ಪಡಿಸಲು ಇರತಕ್ಕದ್ದು.

## ನಮಗೆ ಆತನ ಜೋಪಾನ ಮತ್ತು ಚಿಂತನೆ ಇರುವುದು

ಜೀವನದಲ್ಲಿ ನನ್ನ ಪರಿಸ್ಥಿತಿಯ ಬಗ್ಗೆ ಗುಣುಗುಟ್ಟುತ್ತಿರುವಾಗ ಇಲ್ಲವೇ ವಿಪತ್ತುಗಳ ಬಗ್ಗೆ ದೂರುವಾಗ, ಯೋಸೇಫನು ಕೆಟ್ಟದ್ದಾಗಿ ನಡಿಸಿಕೊಳ್ಳಲ್ಪಡುತ್ತಿರುವಾಗ ಅವನ ಉತ್ತಮ ನಡತೆಯು ನನ್ನನ್ನು ನಾಚಿಕೆ ಪಡುವಂತೆ ಮಾಡುತ್ತದೆ. ಅವನಿಗೆ ಸಂಭವಿಸಿದ್ದ ಎಲ್ಲದರಲ್ಲಿಯೂ ತಂದೆಯ ಹಸ್ತವಿತ್ತು. ಯೋಸೇಫನ ಮತ್ತು ನನ್ನ ತಂದೆಯು ನನ್ನ ಎಲ್ಲಾ ಚಿಂತಾಭಾರವನ್ನು ತನ್ನ ಮೇಲೆ ಹಾಕಬೇಕೆಂದು ಕರೆಯುತ್ತಾನೆ. ಯಾಕಂದರೆ ಆತನು ನನ್ನ ಬಗ್ಗೆ ಚಿಂತಿಸುತ್ತಾನೆ (1 ಪೇತ್ರ 5:7). ಗುಣುಗುಟ್ಟಲು ನಾನು ಶೋಧಿಸಲ್ಪಡುವಾಗ, ಮಗನು ಕೆಲವು ಸಲ ಶಿಕ್ಷಿಸಲ್ಪಡ ಬೇಕಾಗುತ್ತದೆ ಎಂಬುದನ್ನು "ನೀನು ಮರೆತಿರುವಿ" ಎಂದು ಮೃದುವಾಗಿ ಗದರಿಸುತ್ತಾನೆ (ನೋಡಿರಿ ಇಬ್ರಿಯ 12:5). ಹಳೇ ಮತ್ತು ಹೊಸ ಒಡಂಬಡಿಕೆ ಎರಡರಲ್ಲೂ "ಮಗನೇ, ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡಣಿ ಆತನು ನಿನ್ನನ್ನು ಗದರಿಸುವಾಗ ಬೇಸರ ಗೊಳ್ಳಬೇಡಣಿ ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆಣಿ ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ" (ಇಬ್ರಿಯ 12:5ಬಿ, 6) ಎಂಬುದನ್ನು ಅರ್ಥಮಾಡಿಕೊಳ್ಳ ಬೇಕೆಂದು ಬೇಡಿಕೊಂಡಿದ್ದಾನೆ.

ನನ್ನ ಭೂಲೋಕದ ತಂದೆಯು ಕೊಡದಿದ್ದ ಸಂಗತಿಗಳಿಗಾಗಿ ಕೆಲವು ಸಲ (ಕೆಲವು ಸಲ ಕಣ್ಣೀರಿನಿಂದ) ಬೇಡಿಕೊಂಡಿದ್ದೇನೆ. ಅವು ನನಗೆ ಒಳ್ಳೆಯವುಗಳಲ್ಲ ಎಂದು ಅತನು ತಿಳಿದಿದ್ದನು. ಕೆಲವು ಸಲ ಪರಲೋಕದ ತಂದೆಯು, ಆತನು ನನ್ನನ್ನು ಪ್ರೀತಿಸುವದರಿಂದ, ನಾನು ಬೇಡಿಕೊಂಡಿದ್ದನ್ನು ಕೊಡುವದನ್ನು ತಿರಸ್ಕರಿಸುತ್ತಾನೆ. ಆತನಿಗೆ ಚೆನ್ನಾಗಿ ತಿಳಿದಿರುವುದು ನಾನು ಮುದುಕನಾದಾಗ, ಆತನ ಮುಂದೆ ನಾನಿನ್ನೂ ಚಿಕ್ಕವನಾಗಿರುವೆನು. ನಾವು ಆತನ ಆಜ್ಞೆಗಳನ್ನು ಕೈಕೊಳ್ಳುತ್ತಿರುವವರೆಗೆ ಮತ್ತು ಆತನ ದೃಷ್ಟಿಯಲ್ಲಿ ಒಳ್ಳೆಯದನ್ನು ಮಾಡುವವರೆಗೆ ನನ್ನ ಮತ್ತು ನಿಮ್ಮ ಪ್ರಾರ್ಥನೆಗಳನ್ನು ಕೇಳುವಲ್ಲಿ ಹಾಗೂ ಉತ್ತರಿಸುವದರಲ್ಲಿ ಆತನೆಂದೂ ಸೋತುಹೋಗುವದಿಲ್ಲ (1 ಯೋಹಾನ 3:22). ಕೆಲವು ಸಂಗತಿಗಳಿಗೆ ನೀವು ಪುನ ಪುನ ಬೇಡಿಕೊಂಡರೆ, ಆಗ ಅವು ತಿರಸ್ಕರಿಸಲ್ಪಟ್ಟರೆ, ತನ್ನ ಶರೀರದಲ್ಲಿಯ ಮುಳ್ಳನ್ನು ತೆಗೆಯುವಂತೆ ಪುನ ಪ್ರಾರ್ಥಿಸಿದ ಪೌಲನನ್ನು ಜ್ಞಾಪಿಸಿಕೊಳ್ಳಿರಿ (2 ಕೊರಿಂಥ 12:8, 9). ದೇವರು ಯಾವುದೇ ಒಳ್ಳೇ ಸಂಗತಿಯನ್ನು ಹಿಂದಿಟ್ಟು ಕೊಳ್ಳುವದಿಲ್ಲವೆಂದು ನಂಬಿಕೆಯ ವಾಕ್ಯವು ಭರವಸೆ ಕೊಡುತ್ತದೆ (ಕೀರ್ತನೆ 84:11). ನಿಮ್ಮ ಬಿನ್ನಹದ ಆತನ ತಿರಸ್ಕಾರವು ಹೇಗೂ ಒಳ್ಳೆಯದಕ್ಕಾಗಿ ಕಾರ್ಯಮಾಡುವವೆಂದು ನೀವು ತಿಳಿಯಬೇಕೆಂದು ಆತನು ಬಯಸುತ್ತಾನೆ.

ನೀವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದಾತನಿಗೆ (ಎಫೆಸ 3:20) "ಬಲವಾಗಿ ಕೂಗುತ್ತ ಕಣ್ಣೀರು ಸುರಿಸುತ್ತ ಪ್ರಾರ್ಥನೆ ವಿಜ್ಞಾಪನೆಗಳನ್ನು" (ಇಬ್ರಿಯ 5:7) ಯೇಸುವಿನಂತೆ ನೀವು ಸಮರ್ಪಿಸಿದರೆ, ನೀವು ಬಯಸಿದ್ದನ್ನು ತಿರಸ್ಕರಿಸಿದ್ದಕ್ಕಾಗಿ ನೀವು ದು ಖಾಕ್ರಾಂತರಾಗುವುದು ಆತನು ಬಯಸುವದಿಲ್ಲ. ನೀವು ಕೇಳುವಂಥದ್ದು ಇತರರಿಗೆ ಒಳ್ಳೆಯದಾಗಿರದೇ ಇರಬಹುದು. ಕರ್ತನ ಕಣ್ಣುಗಳು ಲೋಕದಲ್ಲೆಲ್ಲಾ ಆತ್ತಿತ್ತ ಚಲಿಸುವವು (2 ಪೂರ್ವಕಾಲವೃತ್ತಾಂತ 16:9) ಮತ್ತು ಅವರು ಮುಂದಾಗಿಯೇ ನಿತ್ಯತ್ವದೊಳಗೆ ನೋಡುವರು. ಯೇಸುವಿನ ತಂದೆಯು ಆತನು ಶ್ರಮೆಪಡುವದನ್ನು ನೋಡಲು ಬಯಸಲಿಲ್ಲ. ಆದರೆ ಆತನ ಪ್ರಾರ್ಥನೆಯು

ತಿರಸ್ಕರಿಸಲ್ಪಟ್ಟಿತು. ಯೇಸುವಿನ ತಂದೆಯು ನಿಮ್ಮ ತಂದೆಯೂ ಆಗಿರುವನು ಮತ್ತು ನೀವು ಜನಿಸಿರದೇ ಇದ್ದಾಗ ನಿಮ್ಮನ್ನು ಆತನು ನೋಡಿದನು. ನಿನ್ನನ್ನೂ ನನ್ನನ್ನೂ ಆತನು ನೋಡಿದ್ದರಿಂದ ಹಾಗೂ ನಮ್ಮ ಜೋಪಾಸನೆ ಮಾಡಿದ್ದರಿಂದ ದೇವರು ತನ್ನ ಒಬ್ಬನೇ ಮಗನನ್ನು ಜಜ್ಜಿದನು. ಆತನನ್ನು ಶೋಕಕ್ಕೆ ಗುರಿಪಡಿಸಿದನು (ನೋಡಿರಿ ಯೆಶಾಯ 53:10). ಹೀಗೆ ತನ್ನ ತಂದೆಯನ್ನು ಯಾವಾಗಲೂ ಮೆಚ್ಚಿಸಿದಾತನ ಆಸಕ್ತಿಯುಳ್ಳ, ಕರುಣೆಯುಳ್ಳ ಬಿನ್ನಹವು (ಯೋಹಾನ 8:29) ಕೇಳಲ್ಪಡಲಿಲ್ಲ. ತಂದೆಯು ನಿಮ್ಮ ಸತತವಾದ ಬಿನ್ನಹವನ್ನು ತಿರಸ್ಕರಿಸುವಾಗ, ನೀವು ಆತನ ಒಬ್ಬನೇ ಮಗನಿಗಿಂತ ಹೆಚ್ಚು ಉತ್ತಮರಲ್ಲವೆಂಬುದನ್ನು ಜ್ಞಾಪಿಸಿಕೊಳ್ಳಿರಿ.

## ನಮಗೆ ಆತನ ನಂಬಿಗಸ್ತಿಕೆಯಿರುತ್ತದೆ

ನೀವು ಆತನಿಗೆ ಒಪ್ಪಿಸಿಕೊಟ್ಟದ್ದನ್ನು ಆ ದಿನದವರೆಗೆ ಕಾದುಕೊಳ್ಳಲು ಶಕ್ತನಾದ ಸರ್ವಶಕ್ತ ತಂದೆಯು ನಮಗಿದ್ದಾನೆ (2 ತಿಮೊಥೆ 1:12). ಅಂಥ ನಿತ್ಯವಾದ ಧನ್ಯತೆಯ ಭರವಸೆಯನ್ನು ಕೊಡಲು ನೀವು ಆತನನ್ನು ಪ್ರೀತಿಸುವವರೆಗೆ ಎಲ್ಲಾ ಸಂಗತಿಗಳು ಒಳ್ಳೆಯದಾಗಿ ಕಾರ್ಯ ಮಾಡುವಂತೆ ಆತನು ಮಾಡುತ್ತಾನೆ (ರೋಮಾಪುರ 8:28). ಒಳ್ಳೆಯದಕ್ಕಾಗಿ ಎಲ್ಲವುಗಳು ಕಾರ್ಯರೂಪಕ್ಕೆ ತರಲು ಆತನು ಹೇಗೆ ನಿಮ್ಮ ಜೀವನದ ಪರಿಸ್ಥಿತಿಗಳನ್ನು ಏರ್ಪಡಿಸುವನು ಮತ್ತು ಮೇಲ್ವಿಚಾರಣೆ ಮಾಡುವನು? ಪ್ರಶ್ನೆಗೆ ಉತ್ತರವು ಏನಾಗಿದೆ ಎಂಬುದರಬಗ್ಗೆ ಚಿಂತಿಸಬೇಕಾಗಿಲ್ಲ. ನೀವು ಲಕ್ಷ್ಯ ವಿಡಬೇಕಾದದ್ದು ನಂಬುವಂಥದ್ದರ ಬಗ್ಗೆ, ಆದರೆ ಸಂಶಯ ಪಡುವಂಥದ್ದಲ್ಲ. ಆತನು ಹೇಳಿದ್ದನ್ನು ಆತನು ಮಾಡುವನು, ದೇವರು ನಂಬಿಗಸ್ತನು. ಅಪನಂಬಿಕೆಯ ಮುಖಾಂತರ ದೇವರ ವಾಗ್ದಾನವನ್ನು ಅಲಕ್ಷಿಸಬೇಡಿರಿ. ಆದರೆ ವಿಶ್ವಾಸದಲ್ಲಿ ಬಲವಾಗಿ ಬೆಳೆಯಿರಿ, ತಂದೆಯಾದ ದೇವರಿಗೆ ಮಹಿಮೆ ಸಲ್ಲಿಸಿರಿ (ರೋಮಾಪುರ 4:20).

ನಿಮಗೆ ಸಂಕಟಗಳು ಹೆಚ್ಚಾಗಿರುವಂತೆ ತೋರುವಾಗಲೂ ಬಾಧೆಯ ವರ್ಷಗಳು ಹೆಚ್ಚುತ್ತಾ ಹೋದರೂ ನೀವು ಮರಣದವರೆಗೆ ನಂಬಿಗಸ್ತರಾಗಿರುವಂತೆ ಅಂತ್ಯದವರೆಗೆ ನಿರೀಕ್ಷೆಯಲ್ಲಿ ನಂಬಿರಿ.

## ನಮಗೆ ಆತನ ರಕ್ಷಣೆಯಿದೆ

ಎಲ್ಲಾ ಸಂಗತಿಗಳು ಒಳ್ಳೆಯದಕ್ಕಾಗುವಂತೆ ಮಾಡುವಲ್ಲಿ ನಿಮಗೆ ವೈಯಕ್ತಿಕವಾಗಿ ಆತನು ಒದಗಿಸುವನಲ್ಲದೇ (ವೈಯಕ್ತಿಕ ಹಾಗೂ ವಿಶೇಷ ಕಟಾಕ್ಷ), ಸೈತಾನನು ಬಹಳ ಸಮೀಪದಲ್ಲಿ ಬರಲು ಪ್ರಯತ್ನಿಸುವಾಗ ಕರುಣಾ ಹಸ್ತದಿಂದ ಸಹಾಯ ಮಾಡುವನು. ನಿಮ್ಮ ಶಕ್ತಿಗೆ ಮೀರಿ ನೀವು ಶೋಧಿಸಲ್ಪಡುವಂತೆ ಆತನು ಬಿಡುವದಿಲ್ಲ. ಆದರೆ ನಿಮ್ಮ ದಾರಿಯಲ್ಲಿರುವ ಶೋಧನೆಗಳಿಂದ ತಪ್ಪಿಸಿಕೊಳ್ಳುವ ಮಾರ್ಗಗಳನ್ನು ನಿಮಗೆ ತೋರಿಸುವನು (1 ಕೊರಿಂಥ 10:13).

ನಿಮ್ಮ ತಂದೆಯು ಎಲ್ಲರಿಗಿಂತ ಹೆಚ್ಚು ದೊಡ್ಡವನಾಗಿರುವನು ಮತ್ತು ಮನುಷ್ಯನಾಗಲೀ, ಅಪವಾದಿಯಾಗಲೀ ಆತನ ಕೈಯಿಂದ ನಿಮ್ಮನ್ನು ಕಿತ್ತುಕೊಳ್ಳಲು ಶಕ್ತನಾಗಿರುವದಿಲ್ಲ (ಯೋಹಾನ 10:28, 29). ಒಳ್ಳೆಯ ತಂದೆಯು ನಿಮ್ಮನ್ನು ಎಂದೆಂದಿಗೂ ಎಸೆದು ಬಿಡುವಂಥ ರೀತಿಯಲ್ಲಿ ನೀವು ವರ್ತಿಸಬಹುದು (1 ಪೂರ್ವಕಾಲವೃತ್ತಾಂತ 28:9), ಆದರೆ ಅದು ನಿಮ್ಮ ಸ್ವಂತ ತಪ್ಪಾಗಿರುವುದು. ನೀವು ಪರಲೋಕಕ್ಕೆ ಹೋಗಲು ಬಯಸಿದರೆ,

ನೀವು ಬೀಳದಂತೆ ಕಾಪಾಡಲು ಆತನು ಶಕ್ತನಾಗಿರುವನು. ಹೆಚ್ಚಾದ ಆನಂದದೊಂದಿಗೆ ತನ್ನ ಮಹಿಮೆಯ ಸನ್ನಿಧಿಯಲ್ಲಿ ನಿಮ್ಮನ್ನು ತಪ್ಪಿಲ್ಲದವರನ್ನಾಗಿ ಸಮರ್ಪಿಸುವನು (ಯೂದ 24). ಬಲಗಡೆಯಲ್ಲಿ ಕೂಡಿಸಲ್ಪಡುವವರು ಹಾಗೂ ಸದಾಕಾಲಕ್ಕೂ ದಂಡಿಸಲ್ಪಟ್ಟವರು ದೇವರ ಕಡೆಗೆ ತಮ್ಮ ಬೆರಳುಗಳನ್ನು ತೋರಿಸಿ, "ನಿನ್ನನ್ನು ದೂಷಿಸಬೇಕು" ಎಂದು ಹೇಳ ಲಾರರು. ನಾವು ತಪ್ಪು ಮಾಡುವಾಗ ಆತನಿಗೆ ನೋವಾಗುತ್ತದೆ, ನಮ್ಮನ್ನು ರಕ್ಷಿಸುವದಕ್ಕಾಗಿ ಮತ್ತು ನಾವು ಆತನೊಂದಿಗೆ ಇರುವದಕ್ಕಾಗಿ ಒಳ್ಳೆಯ ಹಾಗೂ ನೀತಿವಂತನಾದ ದೇವರು ಮಾಡುವಂಥದ್ದೆಲ್ಲವನ್ನೂ ಮಾಡಿದ್ದಾನೆ.

> ನನ್ನ ಜೀವದಾಣೆ, "ದುಷ್ಟನ ಸಾವಿನಲ್ಲಿ ನನಗೆ ಲೇಶವಾದರೂ ಸಂತೋಷವಿಲ್ಲ, ಅವನು ತನ್ನ ದುರ್ಮಾರ್ಗವನ್ನು ಬಿಟ್ಟು ಬಾಳುವುದೇ ನನಗೆ ಸಂತೋಷ. ಇಸ್ರಾಯೇಲ್ ವಂಶದವರೇ, ನಿಮ್ಮ ದುರ್ಮಾರ್ಗಗಳನ್ನು ಬಿಡಿರಿ, ಬಿಟ್ಟು ಬಿಡಿರಿಣಿ ಇಸ್ರಾಯೇಲಿನ ಮನೆತನದವರೇ ನೀವು ಸಾಯುವುದು ಏಕೆ?" ಇದು ಕರ್ತನಾದ ಯೆಹೋವನ ನುಡಿ (ಯೆಹೆಜ್ಕೇಲ 33:11).

ಎಲ್ಲಾ ಜನರು ರಕ್ಷಿಸಲ್ಪಡಬೇಕೆಂಬುದು ತಂದೆಯ ಚಿತ್ತ (1 ತಿಮೊಥೆ 2:4). ಯಾರಾದರೂ ನಾಶವಾಗಬೇಕೆಂಬುದು ಆತನ ಚಿತ್ತವಲ್ಲ (2 ಪೇತ್ರ 3:9). ಭೂಲೋಕ ದಲ್ಲಿ ಇರುವ ತಂದೆಗೆ ಮಕ್ಕಳ ಮೇಲೆ ಕರುಣೆಯಿರುವಂತೆಯೇ ಪರಲೋಕದ ತಂದೆಗೆ ಆತನಲ್ಲಿ ಭಯಪಡುವವರ ಮೇಲೆ ಕನಿಕರವು ಇರುತ್ತದೆ. ಯಾಕಂದರೆ ಆತನು ನಮ್ಮ ಬಲಹೀನತೆಗಳನ್ನು ಬಲ್ಲವನಾಗಿದ್ದಾನೆ ಮತ್ತು ನಾವು ಧೂಳಿಯಾಗಿದ್ದೇವೆ ಎಂಬುದನ್ನು ಜ್ಞಾಪಿಸಿಕೊಳ್ಳುತ್ತಾನೆ (ಕೀರ್ತನೆ 103:13). ಆತನು "ಕರುಣಾಸಾಗರನೂ ದಯಾಸಾಗರನೂ" (ಯಾಕೋಬ 5:11), "ದಯೆಯೂ ದೀರ್ಘ ಶಾಂತಿಯೂ ಪೂರ್ಣ ಪ್ರೀತಿಯುಳ್ಳವನೂ ಆಗಿದ್ದಾನೆ" (ಕೀರ್ತನೆ 103:8).

## ಮುಕ್ತಾಯ

ಆತನ ಕೃಪೆಯಿಂದ ನಾವು ಆತನ ಕುಟುಂಬದೊಳಗೆ ಬರಲು, ಆತನ ಆತ್ಮವನ್ನು ಸ್ವೀಕರಿಸಲು, ಕ್ರೈಸ್ತೇತರರು ಮಾಡದಿರುವ ರೀತಿಯಲ್ಲಿ "ನಮ್ಮ ತಂದೆಯೇ" ಎಂದು ಪ್ರಾರ್ಥಿಸಲು ಶಕ್ತರಾಗಿದ್ದೇವೆ. ಆತನಲ್ಲಿ ಬಾಪ್ತಿಸ್ಮ ಹೊಂದಿದವರು ಮಾತ್ರವೇ ನಿಜವಾಗಿ "ಅಪ್ಪಾ! ತಂದೆಯೇ!" ಎಂದು ಹೇಳಬಲ್ಲರು (ಗಲಾತ್ಯ 4:6). ನೀವು ನಿಜವಾಗಿಯೂ "ಅಪ್ಪಾ! ತಂದೆಯೇ!" ಎಂದು ಹೇಳಿದರೆ ನೀವು ಇನ್ನು ಮುಂದೆ ಅಪವಾದಿಯ ಮಗುವಾಗಿರಲಾರಿರಿ ಮತ್ತು ಪಾಪದ ದಾಸರಾಗಿರಲಾರಿರಿ. "ಆದರೆ ಮಗನಾಗಿರುವಿರಿಣಿ ಮಗನಾಗಿದ್ದರೆ ದೇವರ ಮುಖಾಂತರ ಬಾಧ್ಯಸ್ಥರಾಗಿರುವಿರಿ" (ಗಲಾತ್ಯ 4:7). ರಾಜಕುಮಾರನು ಗಂಭೀರವಾದ ಹೆಜ್ಜೆಯಿಂದ ಮತ್ತು ಹೃದಯದ ಆನಂದದಿಂದ ನಡೆಯಬಹುದು. ಆದರೆ ಅರಸನ ಕುಮಾರನಂತೆ ಎಷ್ಟೋ ಹೆಚ್ಚಾಗಿ ನೀವು ಆನಂದಿಸಲ್ಪಡಬಹುದಲ್ಲವೇ! "ದೇವರ ಮಕ್ಕ ಳೆಂದು ಕರೆಯಲ್ಪಡುವುದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿಣಿ ನಾವು ಆತನ ಮಕ್ಕಳಾಗಿದ್ದೇವೆ" (1 ಯೋಹಾನ 3:1).

ನೀವು ಪ್ರಾರ್ಥನೆ ಮಾಡುವಾಗ, "ನಮ್ಮ ತಂದೆಯೇ" ಎಂದು ಹೇಳಿರಿ.

ಟಿಪ್ಪಣಿಗಳು

[1]“ಒಬ್ಬ ಮನುಷ್ಯನು” ಆಗಲೇ ಸ್ವಾಭಾವಿಕವಾದ ಜನನದಿಂದ ದೇವರ ಮಗನಾಗಿದ್ದಾನೆ: ಆದರೆ ಅಂಥ ರೀತಿಯ ಮಗನಾಗಿರುವಿಕೆಯು ಸಾಕಷ್ಟಾಗಿರುವದಿಲ್ಲ. [2]“ವೇದಿಯ ಕೆಳಗಿರುವ” ಆತ್ಮಗಳ ಸ್ಥಿತಿಯಬಗ್ಗೆ (ಪ್ರಕಟನೆ 6:9, 10) ಡೇವಿಡ್ ರೋಪರ್ ಅವರ “You’ve Got Questions? God Has Answers!” *Truth for Today* (May 1999): 11-17ರಲ್ಲಿ ದೀರ್ಘವಾಗಿ ಚರ್ಚಿಸಲ್ಪಟ್ಟಿದೆ. [3]C. Austin Miles, “I Come to the Garden Alone,” *Songs of Faith and Praise*, comp. and ed. Alton H. Howard (West Monroe, La.: Howard Publishing Co., 1996).